ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟವು ಅನ್ವೇಶಣಾ ಹಂತದಲ್ಲಿದ್ದು, 2000 ಇಸವಿ ವೇಳೆಗೆ ಅದನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಯೋಜನಾ ಆಯೋಗದಿಂದ, ಅಂಗೀಕಾರವಾದಂತೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಅಂದಾಜು ವೆಚ್ಚವು 1214 ಕೋಟಿ ರೂಪಾಯಿಗಳು. ಇದುವರೆವಿಗೂ 660ಕೋಟಿರೂಪಾಯಿಗಳು ಖರ್ಚಾಗಿದ್ದು, ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನೂ 554 ಕೋಟಿ ರೂಪಾಯಿಗಳು(ದರದ ಹೆಚ್ಚಳ ಸೇರಿಲ್ಲ) ಬೇಕಾಗುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟ ಇನ್ನೂ ಅನ್ವೇಷಣಾ ಹಂತದಲ್ಲಿರುವುದರಿಂದ, ಅಂದಾಜು ಪಟ್ಟಿಯನ್ನು ತಯಾರಿಸಿದ ನಂತರವೇ ಅದನ್ನು ಪೂರ್ಣಗೊಳಿಸಲು ಬೇಕಾಗುವ ಹಣವನ್ನು ನಿಶ್ಚಯಿಸಬಹುದು.

ಮೂಡಬಿದ್ರೆ ಕ್ಷೇತ್ರದಲ್ಲಿ ಮಂಜೂರಾಗಿರುವ ಏತನೀರಾವರಿ ಯೋಜನೆಗಳು

2468 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆ ಮುಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳು ಯಾವುವು?

ಆ) ಅವುಗಳಿಗೆ ತಗಲುವ ಖರ್ಚು ಎಷ್ಟು?

ಇ) ಇದರಿಂದ ಎಷ್ಟು ಎಕರೆ ಸಾಗುವಳಿಗೆ ಪ್ರಯೋಜನವಾಗುವುದು?

ಈ) ಈ ಯೋಜನೆಯು ಯಾವ ಹಂತದಲ್ಲಿದೆ ಹಾಗೂ ಇದರ ಕೆಲಸ ಎಂದು ಪೂರ್ಣಗೊಳ್ಳುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಮೂಡಬಿದ್ರೆ ಮುಲ್ಕಿ ಕ್ಷೇತ್ರದಲ್ಲಿ ಈ ಕೆಳಗೆ ತಿಳಿಸಿರುವ 4 ಏತ ನೀರಾವರಿ ಯೋಜನೆಗಳಿಗೆ ಕಾವೇರಿ ಜಲಾನಯನ ಏತ ನೀರಾವರಿ ನಿಗಮದ ಮಂಡಳಿಯು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವುದು.

ಕ್ರ.	*ಏತ ನೀರಾವರಿ*	*ತಾಲ್ಲೂಕು*	*ಅಂದಾಜು ವೆಚ್ಚ ಲಕ್ಷ ರೂ. ಗಳಲ್ಲಿ*	*ಆಚ್ಚುಕಟ್ಟು ಎಕರೆ ಗಳಲ್ಲಿ*
1.	ಎಳಂಜಿ	ಮಂಗಳೂರು	23.30	200
2.	ಬಲ್ಕುಂಜೆ	ಮಂಗಳೂರು	31.90	351
3.	ಸುರಿಂಜೆ	ಮಂಗಳೂರು	26.20	247
4.	ಜಂಗರ ಗುಂಡಿ	ಕಾರ್ಕಳ	24.00	225
	ಒಟ್ಟು		**105.40**	**1023**

ಈ ಯೋಜನೆಗಳ ಕಾಮಗಾರಿಕೆಗಳಿಗೆ ನಬಾರ್ಡ್‌ನಿಂದ ಆರ್ಥಿಕ ನೆರವನ್ನು ಕೋರಲಾಗಿದ್ದು ಆರ್ಥಿಕ ನೆರವನ್ನು ನಿರೀಕ್ಷಿಸಲಾಗಿದೆ. ಅದನ್ನು ಆಧರಿಸಿ ಯೋಜನೆಗಳನ್ನು 1991-92ರಲ್ಲಿ ಪ್ರಾರಂಭಿಸಿ 1992-93ರ ಅಂತ್ಯದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.